ಕರ್ನಾಟಕ ಸರಕಾರ

# ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 12-02-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ: ‘ತತ್ವಪದ ಕಾವ್ಯ – ಶಿವರಾತ್ರಿ’ ಕಾರ್ಯಕ್ರಮ ಕುರಿತಂತೆ ರಾಷ್ಟ್ರೀಯ ಸಂತಕವಿ ಕನಕದಾಮ ಅಧ್ಯಯನ ಮತ್ತು ಸಂಶೋದನಾ ಕೇಂದ್ರದಿಂದ | 13-02-2015 ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ | ಅಂತರಂಗ ಕಿರುಕೋಣೆ, ಎರಡನೇ ಮಹಡಿ, ಚಾಲುಕ್ಯ ಬ್ಲಾಕ್, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002. |
| 2 | Farewell Address by Chairman, Karnataka State Bar Council, Bengaluru<br>To Shri Justice Huluvadi G. Ramesh, Judge. | 13-02-2015 Friday at 1-45 PM | Court Hall No. 1, Principal Bench of the High Court of Karnataka, Bangalore. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# 1688 ಸ್ವತ್ತುಗಳು ಬೆಂಗಳೂರು ಮಹಾನಗರಪಾಲಿಕೆಗೆ ಹಸ್ತಾಂತರ

ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)

ಬೆಂಗಳೂರು ಮಹಾನಗರಪಾಲಿಕೆಗೆ ನಗರ ಸಭೆಯ ಒಟ್ಟು 1688 ಸ್ವತ್ತುಗಳನ್ನು ಬೆಂಗಳೂರು ಮಹಾನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಇಂದು ಬೆಂಗಳೂರು ಮಹಾನಗರ ಪಾಲಿಕೆಯು 110 ಹಳ್ಳಿಗಳು 7 ನಗರಸಭೆ ಹಾಗೂ 1 ಪಟ್ಟಣ ಪಂಚಾಯಿತಿಯನ್ನು ಸೇರಿದಂತೆ 800 ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು, 202ನೇ ಇಸವಿಯಲ್ಲಿ ನೋಟಿಫಿಕೇಷನ್ ಹೊರಡಿಸುವ ಮೂಲಕ 1688 ಸ್ವತ್ತುಗಳನ್ನು ಹಸ್ತಾಂತರಿಸಲಾಗಿದೆ ಎಂದು ಅವರು ಸದನಕ್ಕೆ ಮಾಹಿತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ರಾಮಚಂದ್ರಗೌಡ ಅವರು ಸದನದಲ್ಲಿಂದು 2007 ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸ ಪ್ರದೇಶಗಳು ಸೇರಿದ್ದರೂ ಸಹ ಇದುವರೆವಿಗೂ ಸರ್ಕಾರಿ ಆಸ್ತಿಗಳನ್ನು ಪಾಲಿಕೆ ವ್ಯಾಪ್ತಿಗೆ ಹಸ್ತಾಂತರವಾಗದಿರುವ ಬಗ್ಗೆ ಗಮನ ಸೆಳೆಯುವ ಸೂಚನೆಯಡಿ ಪ್ರಸ್ತಾಪಿಸಿದ ವಿಷಯದ ಬಗ್ಗೆ ಉತ್ತರಿಸಿದ ಮುಖ್ಯಮಂತ್ರಿಯವರು ಸರ್ಕಾರಿ ಶಾಲೆ ಆಸ್ಪತ್ರೆಗಳು ಆಯಾ ಇಲಾಖೆಯ ಮುಖಾಂತರವೇ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರೆವಿನ್ಯೂ ಬಡಾವಣೆ ಹಾಗರೂ ಕಸ ವಿಲೇವಾಗಿ ಸಮಸ್ಯೆಯೂ ಹೆಚ್ಚಾಗುತ್ತಿದೆ ಎಂದು ಹೇಳಿದರು.

ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪಾಲಿಕೆಯನ್ನು ವಿಭಜಿಸುವ ಸಲುವಾಗಿ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ಸರ್ಕಾರಕ್ಕೆ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ವರದಿಯ ಶಾಧಕ ಭಾಧಕಗಳನ್ನು ರಪಿಶೀಲಿಸಿದ ನಂತರ ಸೂಕ್ತ ನಿರ್ಧಾರವನ್ನು ಕೈಗೊಳ್ಳುವುದಾಗಿ ಮುಖ್ಯಮಂತ್ರಿಯವರು ತಿಳಿಸಿದರು.

ಪಹೊ:ಬಿಜಿಪಿ:ಜಿಪಿಆರ್.

## ವಿಧಾನ ಪರಿಷತ್ ಸದಸ್ಯರಿಗೆ ಸವಿರುಚಿ ಉಣಬಡಿಸಿದ ಮುಖ್ಯಮಂತ್ರಿಗಳು

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

ವಿಧಾನ ಪರಿಷತ್ತಿನಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ದಿನಗಳಲ್ಲಿ ಮೈಸೂರಿನಲ್ಲಿ ದೊರೆಯುತ್ತಿದ್ದ ರುಚಿಕರ ತಿಂಡಿ ತಿನಿಸುಗಳ ವರ್ಣನೆಯನ್ನು ಮಾಡುವ ಮೂಲಕ ಸದಸ್ಯರಿಗೆ ಸವಿರುಚಿ ಉಣಬಡಿಸಿದ ಪ್ರಸಂಗವು ನಡೆಯಿತ್ತು.

ಸದಸ್ಯ ರಾಮಚಂದ್ರಗೌಡರ ಗಮನ ಸೆಳೆಯುವ ವಿಷಯದ ಕುರಿತು ಉತ್ತರಿಸಲು ಮುಂದಾದ ಮುಖ್ಯಮಂತ್ರಿಯವರು ಹಿರಿಯ ಸದಸ್ಯ ರಾಮಚಂದ್ರೇಗೌಡರಿಗೆ ಬೆಂಗಳೂರಿನ ಗಲ್ಲಿ ಗಲ್ಲಿಗಳ

ಪರಿಚಯವಿದೆಯೆಂದು ಪ್ರಸ್ತಾಪಿಸುತ್ತಾ ಅದೇ ರೀತಿ ಮೈಸೂರಿನ ಗಲ್ಲಿ ಗಲ್ಲಿಯೂ ತಮಗೆ ಪರಿಚಯವಿದೆ. ಮೈಸೂರಿನಲ್ಲಿ ಒಂದವರೆ ಅಣೆ ಎಂಬ ಗಲ್ಲಿಯಿತ್ತು. ಅಲ್ಲಿ ಯಾವುದೇ ವಸ್ತುಗಳೂ ತಿಂಡಿ ತಿನಿಸುಗಳು ಒಂದುವರೆ ಆಣೆಗೆ ಸಿಗುತ್ತಿದ್ದುದರಿಂದ ಆ ಗಲ್ಲಿಗೇ ಒಂದುವರೆ ಆಣೆ ಎಂಬ ಹೆಸರು ಬಂದಿತ್ತು ಎಂದು ನೆನಪಿಸಿಕೊಂಡರು.

ಆ ದಿನಗಳಲ್ಲಿ 12 ಪೈಸಗೆ ಸೆಟ್ ದೋಸೆ ಸಿಗುತಿತ್ತು ಎಂದಾಗ ಸದಸ್ಯ ಗೋಮಧುಸೂಧನ್ ಅವರು ಅಗ್ರಹಾರದಲ್ಲಿದ್ದ ಹೋಟೆಲ್‌ನ ಸೆಟ್‌ದೋಸೆಯನ್ನು ನೆನಪಿಸಿದರು. ಮೈಸೂರಿನ ಮೈಲಾರಿ, ಚೆಡ್ಡಿ ಹೋಟೆಲ್, ಗುರುಮಲ್ಲು ಚಪಾತಿ ಸೆಂಟರ್ ನಲ್ಲಿ ಸಿಗುತ್ತಿದ್ದ ಮದುವೆ ಊಟದ ರುಚಿಯನ್ನು ವರ್ಣಿಸುತ್ತಿದ್ದಾಗ, ಸದಸ್ಯ ಗೋ ಮಧುಸೂಧನ್ ಅವರು ಶ್ರೀ ಹೋಟೆಲ್‌ನ್ನು ಪ್ರಸ್ತಾಪಿಸಿದ ಕಾರಣ ಮುಖ್ಯಮಂತ್ರಿಯವರು ಶ್ರೀ ಹೋಟೆಲ್‌ನ ನಾಟಿ ಕೋಳಿ, ಮುದ್ದೆ, ಕಾಲುಸೂಪು ಹಾಗೂ ದೊನ್ನೆ ಬಿರಿಯಾನಿಯನ್ನು ನೆನಪಿಸಿಕೊಂಡು, ಗೋ ಮಧುಸೂಧನ್ ಕೂಡ ಇದರ ರುಚಿ ನೋಡಿದ್ದಾರೆನೋ ಎಂದು ತಮಾಷೆ ಮಾಡಿದರು.

ಮುಖ್ಯಮಂತ್ರಿಯವರ ತಮಾಷೆಗೆ ಈಶ್ವರಪ್ಪ ಅವರು ಗೋ ಮಧುಸೂಧನ್ ಅವರು ಇದುವರೆವಿಗೂ ಒಂದು ಮೊಟ್ಟೆ ಕೂಡ ತಿಂದಿಲ್ಲವೆಂದರು. ಈಗ ತಿಂದಿಲ್ಲದಿದ್ದರೆ ಮೇಲೆ ಹೋದಾಗ ನೀನು ಏನೇನು ತಿಂದಿದ್ದೀ ಎಂದು ಕೇಳುತ್ತಾರೆ. ನೀವು ಏನೂ ತಿಂದಿಲ್ಲ ಎಂದು ಹೇಳಿದರೆ ಮತ್ತೆ ಅವರನ್ನು ಭೂಮಿಗೆ ವಾಪಸ್ ಕಳುಹಿಸುತ್ತಾರೆ ಎಂದು ಮುಖ್ಯಮಂತ್ರಿಗಳು ಕಿಚಾಯಿಸಿದರು.

ಮುಖ್ಯಮಂತ್ರಿಯವರು ತಿಂಡಿ ತಿನಿಸುಗಳ ಬಗ್ಗೆ ಬರೀ ವರ್ಣಿಸುತ್ತಾರೋ ನಮಗೂ ರುಚಿ ತೋರಿಸುತ್ತೀರೋ ಎಂದು ಈಶ್ವರಪ್ಪ ಪ್ರಸ್ತಾಪಿಸಿದಾಗ ಖಂಡಿತವಾಗಿ ತಮ್ಮನ್ನು ಮೈಸೂರಿಗೆ ಆಹ್ವಾನಿಸುವುದಾಗಿ ತಿಳಿಸಿದರು. ಒಟ್ಟಿನಲ್ಲಿ ಪರಿಷತ್ತಿನಲ್ಲಿಂದು ಎಲ್ಲರೂ ರುಚಿ ರುಚಿಯಾದ ತಿಂಡಿಗಳನ್ನು ನಗು ನಗುತ್ತಾ ಸವಿದರು.

ಪಹೊ:ಬಿಜೆಪಿ:ಜೆಪಿಆರ್.

## ಅನಧಿಕೃತ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಅವಕಾಶ

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಅನಧಿಕೃತ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನ ಸದಸ್ಯ ಪ್ರೊ. ಪಿ.ವಿ. ಕೃಷ್ಣ ಭಟ್ ಮತ್ತು ವೈ.ಎ. ನಾರಾಯಣ ಸ್ವಾಮಿ ಅವರು ಶೂನ್ಯ ವೇಳೆಯಲ್ಲಿ ಅನಧಿಕೃತ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಬಾಹ್ಯ ವಿದ್ಯಾರ್ಥಿಗಳಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ಪ್ರಸ್ತಾಪಿಸಿದ ವಿಷಯಕ್ಕೆ ಲಿಖಿತ ಉತ್ತರ ನೀಡಿರುವ ಸಚಿವರು ಎಲ್ಲಾ ಜಿಲ್ಲೆಗಳಲ್ಲಿ ಅಧಿಕೃತ ಶಾಲೆಗಳಲ್ಲಿ ವ್ಯಾಸಂಗ ಮಾಡದ 15 ವರ್ಷ ಮೀರಿದ

ಅಭ್ಯರ್ಥಿಗಳು ಯಾವುದಾದರೂ ಅಧಿಕೃತ ಶಾಲೆಯ ಮುಖಾಂತರ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಈ ರೀತಿ ನೋಂದಾಯಿಸಿಕೊಂಡು ಪರೀಕ್ಷೆ ಬರದು ತೇರ್ಗಡೆಯಾದ ಅಭ್ಯರ್ಥಿಗಳ ಅಂಕಪಟ್ಟಿಯಲ್ಲಿ ಶಾಲಾ ಅಭ್ಯರ್ಥಿಗಳು, ಪುನರಾವರ್ತಿತ ಅಭ್ಯರ್ಥಿಗೆ, ಖಾಸಗಿ ಅಭ್ಯರ್ಥಿ ಮತ್ತು ಖಾಸಗಿ ಪುನರಾವರ್ತಿತ ಅಭ್ಯರ್ಥಿ ಎಂದು ನಮೂದಿಸಲಾಗುತ್ತಿದೆ. ಈ ಅಂಕಪಟ್ಟಿಗಳಿಂದ ವಿದ್ಯಾರ್ಥಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಲಿ ಅಥವಾ ಉದ್ಯೋಗಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಹಾಗೆಯೇ ಪ್ರಸಕ್ತ 12 ಅನಧಿಕೃತ ಶಾಲೆಗಳಲ್ಲಿ 10 ನೇ ತರಗತಿ ವ್ಯಾಸಂಗ ಮಾಡುತ್ತಿರುವ 229 ವಿದ್ಯಾರ್ಥಿಗಳು ಸೇರಿದಂತೆ 16185 ಖಾಸಗಿ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆಂದು ಸಚಿವರು ತಿಳಿಸಿದ್ದಾರೆ.

ಪಹೊ:ಬಿಜಿಪಿ:ಜಿಪಿಆರ್.

## ಕಾಲುಬಾಯಿಗೆ 2014-15 ರಲ್ಲಿ ಜಾನುವಾರು ಮೃತಪಟ್ಟಿಲ್ಲ

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

**ರಾಜ್ಯದಲ್ಲಿ ಕಾಲುಬಾಯಿ ಜ್ವರ ಕಾಯಿಲೆಯಿಂದ 2014-15 ನೇ ಸಾಲಿನಲ್ಲಿ ಒಂದು ಜಾನುವಾರು ಕೂಡ ಮೃತಪಟ್ಟಿಲ್ಲವೆಂದು ಪಶುಸಂಗೋಪನಾ ಸಚಿವ ಟಿ.ಬಿ. ಜಯಚಂದ್ರ ಅವರು ವಿಧಾನ ಪರಿಷತ್ತಿನಲ್ಲಿಂದು ಮಾಹಿತಿ ನೀಡಿದ್ದಾರೆ.**

**ಸದಸ್ಯ ವಿ ಸೋಮಣ್ಣ ಅವರ ಪ್ರಶ್ನೆಗೆ ಉತ್ತರಿಸಿರುವ ಅವರು 2013-14 ನೇ ಸಾಲಿನಲ್ಲಿ ಕಾಲುಬಾಯಿ ಕಾಯಿಲೆಯಿಂದ 14677 ಜಾನುವಾರುಗಳು ಮೃತಪಟ್ಟಿದ್ದವು. ಆದರೆ ಪ್ರಸಕ್ತ ಸಾಲಿನಲ್ಲಿ ಈ ಕಾಯಿಲೆಗೆ ಜಾನುವಾರು ಮೃತಪಟ್ಟಿಲ್ಲ. 2012 ರಿಂದ ಇಲ್ಲಿಯವರೆಗೆ ಈ ರೋಗದ ನಿಯಂತ್ರಣಕ್ಕೆ ಜಾನುವಾರುಗಳಿಗೆ ಲಸಿಕೆ ಹಾಕುವ ಸಲುವಾಗಿ 13 ಕೋಟಿ 32 ಲಕ್ಷದವರೆಗೆ ಹಣವನ್ನು ಬಿಡುಗಡೆಮಾಡಲಾಗಿದ್ದು 2012-13 ನೇ ಸಾಲಿನಲ್ಲಿ ಈ ರೋಗದಿಂದ ಮರಣ ಹೊಂದಿದ ಜಾನುವಾರುಗಳ ಮಾಲೀಕರಿಗೆ ರೂ. 20 ಕೋಟಿ 73 ಲಕ್ಷದವರೆಗೆ ಪರಿಹಾರ ಧನವನ್ನು ವಿತರಿಸಲಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.**

**ಪಹೊ:ಬಿಜಿಪಿ:ಜಿಪಿಆರ್.**

# ರೈಲ್ವೆ ಯೋಜನೆಗಳು ರಾಜ್ಯದಿಂದ ಕೈತಪ್ಪಲು ಅವಕಾಶ ನೀಡುವುದಿಲ್ಲ.

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಕೇಂದ್ರದ ರೈಲ್ವೆ ಯೋಜನೆಗಳು ರಾಜ್ಯದಿಂದ ಕೈತಪ್ಪಿಹೋಗಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಪರಿಷತ್ ಸದಸ್ಯ ಅಮರನಾಥ್ ಪಾಟೀಲ್ ಅವರು ಶೂನ್ಯ ವೇಳೆಯಲ್ಲಿ ಕೇಂದ್ರದಿಂದ ಬರುವ ರೈಲ್ವೆ ಯೋಜನೆಗಳು ರಾಜ್ಯದಿಂದ ಕೈತಪ್ಪಿಹೋಗುತ್ತಿರುವುದು ಸೇರಿದಂತೆ ಅನೇಕ ಯೋಜನೆಗಳು ಕುಂಠಿತಗೊಂಡಿರುವುದನ್ನು ಪ್ರಸ್ತಾಪಿಸಿದಕ್ಕೆ ಉತ್ತರಿಸಿದ ಮುಖ್ಯಮಂತ್ರಿಯವರು ಮೇಲಿನಂತೆ ಪ್ರತಿಕ್ರಿಯಿಸಿದರು.

ಆ ಯೋಜನೆಗಳು ಕುಂಠಿಗೊಳ್ಳುವುದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯಲ್ಲ. ಅದುಕೇಂದ್ರ ಸರ್ಕಾರದ ಆಯೋಜನೆಯಾಗಿದೆ. ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿರುವ ಒಟ್ಟಾರೆ ಯೋಜನೆಗಳಿಗೆ ಸಾವಿರ ಕೋಟಿಗಳಷ್ಟು ಷೇರನ್ನು ರಾಜ್ಯ ಸರ್ಕಾರ ನೀಡಬೇಕಿದೆ. ಇತ್ತೀಚೆಗೆ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಪ್ರಧಾನಿಯವರಿಗೆ ರಾಜ್ಯ ಸರ್ಕಾರ ಸಲ್ಲಿಸಬೇಕಿರುವ ಷೇರು ಮೊತ್ತದ ಮೂರನೇ ಒಂದು ಭಾಗವನ್ನು ಸಲ್ಲಿಸುತ್ತದೆ. ಉಳಿದ ಮೊತ್ತವನ್ನು ಕೇಂದ್ರ ಸರ್ಕಾರವೇ ಭರಿಸುವಂತೆ ಹಾಗೂ ಮುಂದಿನ ಎಲ್ಲಾ ಯೋಜನೆಗಳು ಸರ್ಕಾರ ಉಚಿತವಾಗಿ ಭೂಮಿಯನ್ನು ಒದಗಿಸಿಕೊಡುತ್ತದೆ. ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವಂತೆ ಕೋರಿದ್ದೇನೆ ಎಂದು ತಿಳಿಸಿದರು.

ಹೈದರಾಬಾದ್ ಕರ್ನಾಟಕ, ಭಾಗದ ಯೋಜನೆಗಳನ್ನು ಸರ್ಕಾರವು ಆಧ್ಯತೆಯ ಮೇಲೆ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿಯವರು ಆಶ್ವಾಸನೆ ನೀಡಿದರು.

ಪಹೊ:ಬಿಜಿಪಿ:ಜಿಪಿಆರ್

# ತತ್ವಪದ ಕಾವ್ಯ – ಶಿವರಾತ್ರಿ

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರಿನ ಕಾವ್ಯ ಮಂಡಲದ ಸಹಯೋಗದಲ್ಲಿ 'ತತ್ವಪದ ಕಾವ್ಯ – ಶಿವರಾತ್ರಿ' ಕಾರ್ಯಕ್ರಮವನ್ನು ಫೆಬ್ರವರಿ 17 ರಂದು ಸಂಜೆ 6–00 ಗಂಟೆಗೆ ನಗರದ ಮಲ್ಲತ್ತಹಳ್ಳಿಯಲ್ಲಿರುವ ಜ್ಞಾನಭಾರತಿ ಆವರಣದ ಕಲಾಗ್ರಾಮದಲ್ಲಿ ಹಮ್ಮಿಕೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ. ಎನ್. ನಾಗಾಂಬಿಕಾ ದೇವಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ವಿವಿಧ ಜಿಲ್ಲೆಗಳ ಕಲಾತಂಡಗಳಿಂದ ಅಹೋರಾತ್ರಿ ವಿಶೇಷ ಕಾರ್ಯಕ್ರಮಗಳು ನಡೆಯಲಿದೆ.

ಪಹೊ:ಬಾಬು:ಜಿಪಿಆರ್

## ಅರೆಭಾಷೆ ಸಾಹಿತ್ಯ ಅಕಾಡೆಮಿಗೆ ಸದಸ್ಯರ ನೇಮಕ

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

**ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗೆ ಸದಸ್ಯರನ್ನಾಗಿ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಸದಾನಂದ ಮಾವಾಜಿ, ಶ್ರೀ ಬಿ.ಸಿ. ವಸಂತ, ಶ್ರೀ ಎಂ. ಬೋಜಪ್ಪ ಪೌಡ ಮತ್ತು ಕೊಡಗು ಜಿಲ್ಲೆಯ ಶ್ರೀ ಮಂದ್ರಿರ ಮೋಹನ್ ದಾಸ್ ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.**

**ಪಹೊ:ಬಾಬು:ಜಿಪಿಆರ್**

# Appointment of Commission Advocate to Justice H.S. Kempanna Commission of Inquiry

**Bangalore, February 12 (Karnataka Informaton)**

Justice H.S. Kempanna heading Justice H.S. Kampanna Commission of Inquiry has appointed Sri. K.P. Asokumar as the Commission Advocate. Prior to this he was working as Government Advocate at the High Court of Karnataka.

## ಶ್ರೀ ಕೆ.ಪಿ. ಅಸೋಕುಮಾರ್ ನ್ಯಾ: ಹೆಚ್.ಎಸ್. ಕೆಂಪಣ್ಣ ವಿಚಾರಣಾ ಆಯೋಗದ ವಕೀಲರಾಗಿ ನೇಮಕ

**ಬೆಂಗಳೂರು, ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಸರ್ಕಾರಿ ವಕೀಲರಾಗಿ ಉಚ್ಚ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸಿರುವ ಶ್ರೀ ಕೆ.ಪಿ. ಅಸೋಕುಮಾರ್ ಅವರನ್ನು ನ್ಯಾಯಮೂರ್ತಿ ಹೆಚ್.ಎಸ್. ಕೆಂಪಣ್ಣ ವಿಚಾರಣಾ ಆಯೋಗದ ವಕೀಲರಾಗಿ ನ್ಯಾಯಮೂರ್ತಿ ಹೆಚ್.ಎಸ್. ಕೆಂಪಣ್ಣ ಅವರು ನೇಮಿಸಿದ್ದಾರೆ.